(6)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಎಸ್ .ಎಲ್ .ಬೋಜೇಗೌಡ ಹಾಗೂ ಶ್ರೀ ಎಸ್.ವ್ಹಿ. ಸಂಕನೂರ ಇವರುಗಳು ನಿಯಮ 330 ರಡಿಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ**

## ವಿಷಯ

2017-18ನೇ ಶೈಕ್ಷಣಿಕ ಸಾಲಿಗಿಂತ ಹಿಂದೆ ಇಲಾಖೆಯ ಅನುಮತಿ ಪಡೆದು, ರಾಜ್ಯದ್ಯಂತ ಸಾವಿರಾರು ಖಾಸಗಿ ಶಾಲೆಗಳು ನಡೆಯುತ್ತಿರುತ್ತವೆ. ಈ ಶಾಲೆಗಳನ್ನು ಉನ್ನತೀಕರಿಸುವ ಸಲುವಾಗಿ ಮಾನ್ಯತೆ ನವೀಕರಣ ಸಂದರ್ಭದಲ್ಲಿ ಅನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಶುಲ್ಕ, ಅಗ್ನಿ ಸುರಕ್ಷತೆ, ಭೂ ಪರಿವರ್ತನೆ ಮುಂತಾದ ಹತ್ತು ಹಲವು ದಾಖಲಾತಿಗಳನ್ನು ಸಲ್ಲಿಸಬೇಕಾಗಿದ್ದು, ಈ ಸಂಬಂಧ ಮಾನ್ಯ ಉಚ್ಛನ್ಯಾಯಾಲಯವು ಕೆಲವು ಸುರಕ್ಷತಾ ಮಾರ್ಗಸೂಚಿಗಳನ್ನು ಸರಳೀಕರಿಸಿದೆ. ನವೀಕರಣ ಸಂಬಂಧ ಎಲ್ಲಾ ಷರತ್ತುಗಳನ್ನು ಪೂರೈಸುವ ಶಾಲೆಗಳಿಗೆ 10 ವರ್ಷಕ್ಕೊಮ್ಮೆ ನವೀಕರಿಸುವಂತೆ ಆದೇಶಿಸದೆ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

## ಉತ್ತರ

2017-18ನೇ ಶೈಕ್ಷಣಿಕ ಸಾಲಿಗಿಂತ ಹಿಂದೆ ಅನುಮತಿ ಪಡೆದು ನಡೆಯುತ್ತಿರುವ ಖಾಸಗಿ ಶಾಲೆಗಳಿಗೆ ಸರಕಾರದ ಅಧಿಸೂಚನೆ ಸಂಖ್ಯೆ : ಇಡಿ 77 ಯೋಯೋಕಾ 2010, ದಿನಾಂಕ : 28.04.2012 ಆರ್.ಟಿ.ಇ ನಿಯಮ 11 (6) ರಲ್ಲಿ ಮಾನ್ಯತೆ ಅವಧಿಯನ್ನು 5 ವರ್ಷಗಳಿಗೆ ನಿಗಧಿಪಡಿಸಿರುವಂತೆ ಅನುಷ್ಠಾನಗೊಳಿಸಿದೆ. ಪ್ರಸ್ತುತ ಆರ್.ಟಿ.ಇ ನಿಯಮಗಳಡಿ ಖಾಸಗಿ ಶಾಲೆಗಳಲ್ಲಿ ಗರಿಷ್ಟ 5 ವರ್ಷಗಳಿಗೆ ಮಾನ್ಯತೆ ನವೀಕರಿಸಲಾಗುತ್ತಿದೆ.

ಸಂಖ್ಯೆ : ಇಡಿ 709 ಪಿಜಿಸಿ 2017, ದಿನಾಂಕ : 07.03.2018ರ ಅಧಿಸೂಚನೆ-IIIರಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆ) ನಿಯಮಗಳು 1990ರ ನಿಯಮ 4(3) ಕ್ಕೆ 10 ವರ್ಷಗಳ ಅವಧಿಗೆ ಮಾನ್ಯತೆ ನವೀಕರಣಗೊಳಿಸಲು ಆದೇಶಿಸಲಾಗಿರುತ್ತದೆ. ನಿಗಧಿತ ಎಲ್ಲಾ ಷರತ್ತುಗಳನ್ನು ಪೂರೈಸಿ ಸಂಬಂಧಪಟ್ಟ ದಾಖಲೆಗಳ ಸಮೇತ ಅನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಶಾಲೆಗಳಿಗೆ ಮಾನ್ಯತೆ ನವೀಕರಣವನ್ನು ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ : 2664/2022, ದಿನಾಂಕ : 08.03.2022ರಲ್ಲಿನ ಆದೇಶಾನುಸಾರ 10 ವರ್ಷಗಳಿಗೆ ನವೀಕರಿಸುವ ಕುರಿತು ನಿಯಮಾನುಸಾರ ಕ್ರಮವಹಿಸಲಾಗುವುದು.

**ಸಂಖ್ಯೆ:ಇಪಿ 22 ಪಿಜಿಸಿ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು